

ಸುನಿತಾ ಬಂದು ಬಾಣಂತನ ಮಾಡಿಸಿಕೊಂಡು ಗಂಡು ಮಗುವಿನೊಡನೆ ಮರಳಿದಳು. ಶ್ರೀಪಾದರೂ ಬೆಳೆದು, ತಲೆ ಖಾಲಿ ಸ್ಪೈಟಾಯಿತು. ವೇದವತಿಯ ಹಣೆಯಲ್ಲಿ ನೆರಿಗೆಗಳು ಮೂಡಿ ಬೆಳ್ಳಿಕೂದಲುಗಳು ಹಾರಾಡಿದವು. ಎಲ್ಲರ ಜೊತೆಗೆ ಗುರುಗಳೂ ಬೆಳೆದು ಪ್ರಚಾರ ಹೆಚ್ಚಾಯಿತು. ನವರಾತ್ರಿಯ ಕಾರ್ಯಕ್ರಮ ಜೋರಾಗಿ ನಡೆಯುತ್ತಿತ್ತು. ಶ್ರೀಪಾದ ಸ್ವತಃ ಗುರುಚರಿತ್ರೆ ಸಪ್ತಾಹ ಮಾಡುತಿದ್ದರು. ಕೊನೆಯ ದಿನ ಹೋಮ, ಅನ್ನಸಂತರ್ಪಣೆ ಇರುತ್ತಿತ್ತು. ಪ್ರತಿ ಬಾರಿ ಯಾರಾದರೂ ವಿಶೇಷ ಆಹ್ವಾನಿತರು ಇದ್ದೇ ಇರುತ್ತಿದ್ದರು. ದತ್ತಾತ್ರೇಯನ ಮಕ್ಕಳಿಬ್ಬರಿಗೂ ಆಚರಣೆಗಳಲ್ಲಿ ಪಾಲ್ಗೊಳ್ಳುವ ತವಕ. ಉದಯ, ವಿಜಯ ತಂದೆತಾಯಿಯರೊಂದಿಗೆ ತಪ್ಪದೇ ಬಂದು "ಕಾಕಾ, ನಾ ಏನ ಮಾಡ್ಲಿ? ಮಡೀಲೆ ಬರ್ಲಿ?" ಎಂದು ಭಕ್ತಿ, ಶ್ರದ್ಧೆಗಳಿಂದ ನಿಲ್ಲುತ್ತಿದ್ದರು.